## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1519/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಗಿರೀಶ್ ಹೆಚ್ ಕೆ | CW: 1 | PW: 1 |
| ತಂದೆಯ ಹೆಸರು | : | ಕೃಷ್ಣಪ್ಪ ಹೆಚ್ ಬಿ | | |
| ವಯಸ್ಸು | : | 53 | | |
| ವೃತ್ತಿ | : | ಅಬಕಾರಿ ನಿರೀಕ್ಷಕರು, ಹರಪನಹಳ್ಳಿ | | |
| ವಾಸಸ್ಥಳ | : | ಹರಪನಹಳ್ಳಿ | | |

ದಿನಾಂಕಃ 15.11.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು ಫೆಬ್ರವರಿ 2020 ರಿಂದ ಆಗಸ್ಟ್ 2023 ರವರೆಗೆ ಹೊನ್ನಾಳಿ ಉಪವಿಭಾಗದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20.04.2020 ರಂದು ನಾನು, ನನ್ನ ಸಿಬ್ಬಂದಿಗಳಾದ ಚಾಸಾ 2 ಮತ್ತು 3 ರವರ ಜೊತೆ ಸಂಖ್ಯೆ ಕೆಎ 17 ಜಿ 521 ನಂಬರ್ ನ ಸರ್ಕಾರಿ ವಾಹನದಲ್ಲಿ ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ಸರ್ಕಾರಿ ಆದೇಶದ ಮೇರಿಗೆ ಅಬಕಾರಿ ಸನ್ನದು ಗಳನ್ನು ಸೀಲು ಮಾಡಿದ ಸಮಯದಲ್ಲಿ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ಯಾಸಿನಕೆರೆ ಗ್ರಾಮದ ಮುಖ್ಯರಸ್ತೆಯಲ್ಲಿ ಗಸ್ತು ನಡೆಸುತಿದ್ದಾಗ ಅದೇ ಗ್ರಾಮದ ವೃತ್ತದಲ್ಲಿ ಇದ್ದಂತಹ ಕೆಲವು ವ್ಯಕ್ತಿಗಳು ಚನ್ನೇನಹಳ್ಳಿ ತಾಂಡದಲ್ಲಿ ಸಿ.ಎಂ ಚಂದ್ರಶೇಖರ ಬಿನ್ ಮಂಜನಾಯ್ಕು ಎಂಬ ವ್ಯಕ್ತಿಯು ಅಕ್ರಮವಾಗಿ ಮಧ್ಯ ಸಂಗ್ರಹ ಮಾಡಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ನೀಡಿದ್ದು ಸದರಿ ವ್ಯಕ್ತಿಗಳನ್ನು ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು

ಅವರು ನಿರಾಕರಿಸಿರುತ್ತಾರೆ. ಆಗ ಸಮಯ ರಾತ್ರಿ 8.15 ಆಗಿದ್ದರಿಂದ ಪಂಚರಾಗಿ ಬೇರೆ ಯಾರು ಸಿಗದಿದ್ದರಿಂದ ನಮ್ಮ ಇಲಾಖೆಯ ಸಿಬ್ಬಂದಿಯವರಾದ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿಕೊಂಡು ಇಲಾಖಾ ವಾಹನದಲ್ಲಿ ಕ್ಯಾಸಿನಕೆರೆ ಗ್ರಾಮದಿಂದ ಕುಂಚಗಾರನಹಳ್ಳಿಗೆ ಹೋಗುವ ಮುಖ್ಯರಸ್ತೆಯಲ್ಲಿ ವಾಹನವನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಚನ್ನೇನಹಳ್ಳಿ ತಾಂಡದ ಹತ್ತಿರ ರಸ್ತೆಯ ಮನೆಯ ಮುಂಭಾಗ ಕೆಲವು ವ್ಯಕ್ತಿಗಳು ಕಂಡು ಬಂದಿದ್ದು ಸದರಿ ಸ್ಥಳಕ್ಕೆ ವಾಹನವನ್ನು ನಿಲ್ಲಿಸಿದಾಗ ಸದರಿ ವ್ಯಕ್ತಿಗಳಲ್ಲಿ ಒಬ್ಬ ವ್ಯಕ್ತಿಯು ನಮ್ಮನ್ನು ಕಂಡು ಒಂದು ಚೀಲವನ್ನು ಎಸೆದು ಓಡಿಹೋಗಿರುತ್ತಾನೆ. ಆತನನ್ನು ಹಿಡಿಯಲು ಪ್ರಯತ್ನಿಸಲಾಗಿ ಆತ ಸಿಗಲಿಲ್ಲ. ಸದರಿ ವ್ಯಕ್ತಿಯು ಎಸೆದು ಹೋದಂತಹ ಸ್ಥಳಕ್ಕೆ ಬಂದು ಅಲ್ಲಿದ್ದಂತಹ ವ್ಯಕ್ತಿಗಳ ಸಮಕ್ಷಮ ಶೋಧನಾ ಸಮುಚ್ಛಿತ ಆಧಾರವನ್ನು ತಯಾರಿಸಿಕೊಂಡು ಅಲ್ಲಿಂದ ವ್ಯಕ್ತಿಗಳಿಗೆ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು ಅವರು ನಿರಾಕರಿಸಿರುತ್ತಾರೆ. ನಂತರ ಸದರಿ ಚೀಲವನ್ನು ತೆರೆದು ನೋಡಲಾಗಿ ಮಧ್ಯ ತುಂಬಿದ 180 ಮಿ.ಲಿ 7 ವೆಲ್ಲಿಂಗ್ ಟನ್ ವಿಸ್ಕಿ ಬಾಟಲ್ ಗಳು, 90 ಮಿಲಿಯ 3 ರಾಜಾವಿಸ್ಕಿ ಮಧ್ಯದ ಟೆಟ್ರಾಪ್ಯಾಕ್ ಗಳು, 90 ಮಿಲಿಯ 8 ಕ್ಯಾಪ್ಟನ್ ಮಾರ್ಟಿನ್ ವಿಸ್ಕಿ ಯ ಪ್ಲಾಸ್ಟಿಕ್ ಬಾಟಲ್ ಗಳು, 90 ಮಿಲಿಯ 4 ಡಿಸ್ಟಿಕ್ ಒನ್ ವಿಸ್ಕಿಯ ಪ್ಲಾಸ್ಟಿಕ್ ಬಾಟಲ್ ಗಳು ಒಟ್ಟು 2.61 ಲೀ. ಮಧ್ಯ ಪತ್ತೆಯಾಗಿರುತ್ತದೆ. ಪಂಚರ ಸಮಕ್ಷಮದಲ್ಲಿ ಎಲ್ಲಾ ಮಧ್ಯವನ್ನು ರಸಾಯನಿಕಾ ಪರೀಕ್ಷೆಗಾಗಿ ಮಾದರಿ ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಮಾದರಿ ಚೀಟಿ ಅಂಟಿಸಿ , ಪಂಚರ ಸಹಿ ಪಡೆದು ಅದಕ್ಕೆ ಅಂಟಿಸಲಾಯಿತು. ಮಾದರಿ ಮೊಹರಿನ ನಕಲನ್ನು ತಯಾರಿಸಿ, ಪಂಚನಾಮೆಯನ್ನು ರಾತ್ರಿ 8.45 ರಿಂದ 9.45 ರ ಸಮಯದಲ್ಲಿ ಜರುಗಿಸಲಾಯಿತು. ನಂತರ ಕಚೇರಿಗೆ ಹೋಗಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಯಿತು. ಚಾಸಾ 2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 5 ರವರಿಗೆ ನೀಡಿರುತ್ತೇನೆ.

ಆರೋಪಿಯು ಗೈರು ಹಾಜರಿದ್ದು ಆರೊಪಿ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 180 ಮಿಲಿಯ 7 ವೆಲ್ಲಿಂಗ್ ಟನ್ ವಿಸ್ಕಿ ಬಾಟಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ 1 ಎಂದು ಗುರುತಿಸಲಾಯಿತು. 90 ಮಿಲಿಯ 3 ರಾಜಾವಿಸ್ಕಿ ಮಧ್ಯದ ಟೆಟ್ರಾಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ 2 ಎಂದು ಗುರುತಿಸಲಾಯಿತು. 90 ಮಿಲಿಯ 8 ಕ್ಯಾಪ್ಟನ್ ಮಾರ್ಟಿನ್ ವಿಸ್ಕಿ ಯ ಪ್ಲಾಸ್ಟಿಕ್

ಬಾಟಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ 3 ಎಂದು ಗುರುತಿಸಲಾಯಿತು. 90 ಮಿಲಿಯ 4 ಡಿಸ್ಟಿಕ್ ಒನ್ ವಿಸ್ಕಿಯ ಪ್ಲಾಸ್ಟಿಕ್ ಬಾಟಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ 4 ಎಂದು ಗುರುತಿಸಲಾಯಿತು.

ಸಾಕ್ಷಿಯು ಸ್ಥಳ ಮಹಜರ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಮಹಜರ್ ನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಶೋಧನಾ ಸಮೀಕ್ಷಾ ಆಧಾರವನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಲಿಸ್ಟ್ ಆಫ್ ಆರ್ಟಿಕಲ್ಸ್ ನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಮಾದರಿ ಸೀಲಿನ ನಕಲನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಎಫ್ ಐ ಆರ್ ನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಎಸ್ ಎಂ ಬಿ ವಕೀಲರಿಂದಃ-

ಪಾಟಿ ಸವಾಲಿಗೆ ಕಾಲಾವಕಾಶ ನೀಡಿದ್ದು ಸೂಕ್ತ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.